ಅವಕಾಶ ಮಾಡಿಕೊಟ್ಟಿದ್ದೀರಿ, ದಯವಿಟ್ಟು ಒಂದು ಸಮಯ ನಿಗದಿ ಮಾಡಿ, ಏಕೆಂದರೆ ನಿನ್ನೆ ಕೂಡ ಕಳುಹಿಸಿದ್ದೇವೆ. ಅದರ ಮಹತ್ವ ಹೊರಟುಹೋಗುತ್ತಿದೆ.

ಅಧ್ಯಕ್ಷರು:– 3 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆದಿದ್ದೇನೆ. ಅಲ್ಲಿ ಡಿಸ್‌ಕಸ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೊಂದು ಮಹತ್ವವಾದ ವಿಷಯವಾದ ಬಗ್ಗೆ ಒಂದು ರೆಕಗ್‌ನೈಸ್ಡ್ ಪೊಲಿಟಿಕಲ್ ಪಾರ್ಟಿಯಾಗಿ ನನ್ನ ಹೆಸರು ಇದ್ದರೆ, ನಾನು ಸಹಿ ಮಾಡಿ ಕಳುಹಿಸಿದ್ದರೆ. ಆ ನೋಟೀಸ್‌ನಲ್ಲಿ ಹೆಸರನ್ನು ಸೇರಿಸುವುದಿಲ್ಲ. ವಾಟಾಳ್ ನಾಗರಾಜ್ ಸಹಿ ಮಾಡಿದ್ದಾರೆ. ಒಂದು ಪ್ರಮುಖ ಪಕ್ಷದವರು ಅದಕ್ಕೆ ಸಹಿ ಮಾಡಿದ್ದರೂ ಅವರ ಹೆಸರು ಬಂದಿಲ್ಲ. ಈ ಬಗ್ಗೆ ತಮಗೆ ಪತ್ರ ಬರೆದಿದ್ದೆ. ಅಧ್ಯಕ್ಷರೇ ಬಹಳ ನೊಂದು ಈ ಮಾತು ಹೇಳುತ್ತಿದ್ದೇನೆ. ಅನೇಕ ಬಾರಿ ಇದು ಆಗಿತ್ತು. ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಬಾರದು ಎಂದು ಇದ್ದೆ. ಏಕೆಂದರೆ ಇವತ್ತಾದರೂ ನೋಟೀಸ್‌ನಲ್ಲಿ ಹೆಸರು ಸೇರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ.

ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಕೇಂದ್ರ ಸ್ಥಳದಲ್ಲಿ ಕ್ರೀಡಾಂಗಣ

ಶ್ರೀ ವಿನಯಕುಮಾರ್ ಸೊರಕೆ:– ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಕೇಂದ್ರ ಸ್ಥಳವಾಗಿದ್ದು ಇಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣವಾಗಬೇಕಾಗಿ ಹಲವಾರು ವರ್ಷದಿಂದ ಇರುವ ಬೇಡಿಕೆ. ಪುತ್ತೂರು ತಾಲ್ಲೂಕು ಪರಿಸರದಿಂದ ಹಲವಾರು ರಾಜ್ಯ ಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಳುಗಳು ಸೃಷ್ಟಿಯಾಗಿದ್ದು, ಸಮರ್ಪಕವಾದ ಕ್ರೀಡಾಂಗಣ ಇಲ್ಲದೇ ಇರುವುದು ಕೊರತೆಯಾಗಿದೆ. ಈ ತಾಲ್ಲೂಕುಮಟ್ಟದ ಕ್ರೀಡಾಂಗಣಕ್ಕೆ ಈಗಾಗಲೇ ಜಿಲ್ಲಾಪರಿಷತ್‌ನಲ್ಲಿ ಮಂಜೂರು ಕೆಲಸ ನಡೆದಿದ್ದು ಕೂಡಲೇ ಕೆಲಸ ಪ್ರಾರಂಭಿಸಲು ಯುವಜನ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):– ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ,

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಕೇಂದ್ರದಲ್ಲಿ 1992–93ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆ. ಜಿಲ್ಲಾಪರಿಷತ್ತಿನ ಅಧೀನದಲ್ಲಿರುವ ಕೆಳಕಾಣಿಸಿದ ನಿವೇಶನವನ್ನು ಕ್ರೀಡಾಂಗಣಕ್ಕಾಗಿ ಕಾದಿರಿಸಲಾಗಿದೆ.

1) ಸರ್ವೆ ನಂ. 86:1ಎ	–	1–74 ಎಕರೆ
2) ಸರ್ವೆ ನಂ. 87:1	–	0–92 ಎಕರೆ
3) ಸರ್ವೆ ನಂ. 87:2	–	3–18 ಎಕರೆ
4) ಸರ್ವೆ ನಂ. 87:2ಇ 2	–	0–42 ಎಕರೆ
		6–26 ಎಕರೆ

ಈ ನಿವೇಶನದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಅವರ ರೂ. 26–00 ಲಕ್ಷಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿರುತ್ತಾರೆ.

ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನ ಮೂಲಕ ಗರಿಷ್ಠ ರೂ. 10.00

ಲಕ್ಷ ಅನುದಾನವನ್ನು ತಾಲ್ಲೂಕು ಕ್ರೀಡಾಂಗಣ ಸಮಿತಿಗೆ ಕಂತುಗಳಲ್ಲಿ ಮಂಜೂರು ಮಾಡಲಾಗುವುದು. ಕೇಂದ್ರ ಸರ್ಕಾರ ಈ ಕ್ರೀಡಾಂಗಣಕ್ಕಾಗಿ ರೂ. 12.00 ಲಕ್ಷಗಳನ್ನು ನೀಡಲಿದೆ. ಉಳಿಕೆ ಹಣವನ್ನು ತಾಲ್ಲೂಕುಮಟ್ಟದ ಕ್ರೀಡಾಂಗಣ ಸಮಿತಿಯು ಸಾರ್ವಜನಿಕ ವಂತಿಗೆಯಿಂದ ಭರಿಸಬೇಕಾಗುವುದು. ಪುತ್ತೂರು ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

1993-94ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರಿದ ಚರ್ಚೆ

ಅಧ್ಯಕ್ಷರು:– 93-94ನೇ ಸಾಲಿನ ಆಯವ್ಯಯ ಮೇಲಿನ ಚರ್ಚೆ ಡಾ. ಜೀವರಾಜ ಆಳ್ವರವರು ಮುಂದುವರೆಸಬೇಕು.

† ಡಾ: ಜೀವರಾಜ್ ಆಳ್ವ:– ಮಾನ್ಯ ಅಧ್ಯಕ್ಷರೇ, ನಿನ್ನೆ ಬಹಳ ದೀರ್ಘವಾದ ಭಾಷಣಗಳಲ್ಲಿ ಶ್ರೀ ಬಂಗಾರಪ್ಪನವರು ಬಹಳ ಪ್ರಮುಖವಾದ ವಿಷಯಗಳನ್ನು ಚರ್ಚೆಗೆ ಎತ್ತಿಕೊಂಡರು. ಆ ಚರ್ಚೆಯಲ್ಲಿ ಒಂದು ಮುಖ್ಯ ವಿಚಾರ ಖಜಾನೆಯನ್ನು ಭದ್ರಗೊಳಿಸುವುದು ಒಂದು ಮಾತಾದರೆ, ಖಜಾನೆಯನ್ನು ಯಾವ ತರಹ ಕಡಿಮೆ ಮಾಡಿದರು ಎಂಬುದು ಇನ್ನೊಂದು ಮಾತಾಗುತ್ತದೆ. ಇದರ ಬಗ್ಗೆ ನಿನ್ನೆ ಕೂಡ ನಾನು ಹೇಳಿದ್ದೆ, ಶ್ರೀ ಬಂಗಾರಪ್ಪನವರ ಸರ್ಕಾರದ ಎರಡು ವರ್ಷದ ಆಡಳಿತದ ಬಗ್ಗೆ ಒಂದು ವೈಟ್ ಪೇಪರ್ ಆಗಬೇಕು ಎಂದು. ಆ ವೈಟ್ ಪೇಪರ್ ಆದರೆ ಮಾತ್ರ ನಮಗೆಲ್ಲರಿಗೂ ಚರ್ಚೆ ಮಾಡಲು ಅವಕಾಶವಾಗುತ್ತದೆ. ದೀರ್ಘವಾದ ಚರ್ಚೆಯನ್ನು ಅದರ ಮೇಲೆ ಮಾಡಬಹುದು. ಏತಕ್ಕೆಂದರೆ ಈಗ ಅವರನ್ನು ಪ್ರಶ್ನೆ ಮಾಡುವುದಾಗಲಿ ಅಥವಾ ಅವರ ಮಂತ್ರಿ ಮಂಡಲದ ಕಾರ್ಯಸಾಧನೆಯನ್ನು ಪ್ರಶ್ನೆ ಮಾಡುವಂಥ ಸ್ಥಿತಿಯಲ್ಲಿ ನಾವು ಇಲ್ಲ. ಒಂದು ವೇಳೆ conceding the argument that if the Government is a continuing Body because of the ambiguity in the approach of one of the Members of the Congress Legislature Party and the total condemnation of the Government done in very unparallel and historical condemnation of the Government, we are at a loss. ನಮಗೆ ಏನು ಮಾಡಬೇಕು, ಎನ್ನುವುದು ಅರ್ಥವಾಗುತ್ತಿಲ್ಲ.

ಆದರೆ ಒಂದು ಮಾತನ್ನು ಶ್ರೀ ಬಂಗಾರಪ್ಪನವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳಲು ಇಷ್ಟಪಡುತ್ತೇನೆ. ಅದೇನೆಂದರೆ Mobilisation of resources. It must be conceded. I don't give the credit to the Government or the Leadership of the Chief Minister for that matter. It was because of the unstinted support given by the Commercial Tax Department, there was almost a hike of 100% additional revenue mobilisation in a span of 4 months. In January, this Government was an insolvent Government. They had no money to pay the salary.

ಹಿಂದೆ ಒಂದು ಕಾಲದಲ್ಲಿ ಈ ಕಡೆ ಬಂಗಾರಪ್ಪನವರು ಹಾಗೂ ಶ್ರೀ ವೀರಪ್ಪ ಮೊಯಿಲಿಯವರು ಇದ್ದಾಗ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಬಹಳ ಕಟುವಾಗಿ ಟೀಕೆ ಮಾಡಿದ್ದರು. ದಿವಾಳಿ ಸರ್ಕಾರ ನಿಮ್ಮದು ಅಧಿಕಾರಿಗಳಿಗೆ ಸಂಬಳ ಕೊಡಲು ಗತಿ ಇಲ್ಲ ಎಂದು ಹೇಳಿದ್ದರು. ನಾವು ಅತ್ಯಂತ ವಿಶ್ವಾಸಪೂರ್ವಕವಾಗಿ ನಮ್ಮ ವೈಫಲ್ಯತೆಯನ್ನು ಒಪ್ಪಿಕೊಂಡಿದ್ದೆವು. ನಮ್ಮ ವೈಫಲ್ಯತೆ ಏನು ಎಂದರೆ ಹಾಸಿಗೆಗಿಂತ ಹೆಚ್ಚು ನಾವು ಕಾಲು ಚಾಚಿದ್ದು,